ತನ್ನ ಬೆನ್ನಿನ ಮೇಲೆ ಇದ್ದ ಆ ಮೂಟೆ ಒಂದು ಬದಿ ಇಟ್ಟು ಹೊಟ್ಟೆ ತುಂಬುವಷ್ಟು ಊಟ ಮಾಡಿ ತೇಗುತ್ತಾನೆ. ಊಟದ ನಂತರ ಮತ್ತೆ ಆ ಮೂಟೆ ತೆಗೆದುಕೊಳ್ಳಲು ಮುಂದಾದಾಗ ಆ ಸಂತರು ಹೇಳಿದ ಮಾತು ‘ಉಂಡ ಮನೆಗೆ ಎಂದೂ ಎರಡು ಬಗೆಯ ಬೇಡ’ ಎನ್ನುವುದು ನೆನಪಾಗಿ ತನ್ನಷ್ಟಕ್ಕೆ ತಾನು ‘ಛೇ... ನಾನು ಹಸಿವೆ ಅಂತ ಚೆನ್ನಾಗಿ ಊಟ ಮಾಡಿದೆ. ಅದರಲ್ಲಿ ಉಪ್ಪು ಖಾರ ಸಿಹಿ ಎಲ್ಲವೂ ಇತ್ತು. ಉಂಡ ಮನೆಗೆ ಎರಡು ಬಗೆಯಬಾರದು’ ಎಂದುಕೊಂಡವ ಅದನ್ನು ಅಲ್ಲಿಯೇ ಬಿಟ್ಟು ಅಲ್ಲಿಂದ ಹೊರಡಲು ಅಣಿ ಆದಾಗ ಅಲ್ಲಿದ್ದ ಇಬ್ಬರು ಸೈನಿಕರ ಕಣ್ಣಿಗೆ ಬೀಳುತ್ತಾನೆ. ಅವರು ತಡಮಾಡದೇ ಆತನನ್ನು ಬಂಧಿಸಿ ರಾಜನ ಎದುರು ಹಾಜರುಪಡಿಸುತ್ತಾರೆ. ರಾಜನು ಆತನಿಗೆ ನಿಧಾನವಾಗಿ ವಿಚಾರಿಸಿದಾಗ ಗಿರಿ, ಆ ತನಕ ನಡೆದುದೆಲ್ಲವನ್ನೂ ಒಂದೂ ಬಿಡದೆ ರಾಜನಿಗೆ ವಿವರಿಸುತ್ತಾನೆ. ರಾಜನು ಗಿರಿಯ ಮಾತು ಆಲಿಸಿ ‘ಭೇಷ್, ಹುಡುಗ ಭೇಷ್ ನಿನ್ನ ಧೈರ್ಯ ಮತ್ತು ಸತ್ಯವನ್ನು ಮೆಚ್ಚಿದೆ’ ಎಂದು ಹೇಳಿ ಆತನಿಗೆ ತನ್ನ ಅರಮನೆಯಲ್ಲೇ ಒಂದು ಕೆಲಸ ಕೊಡಿಸುತ್ತಾನೆ. ಅರಮನೆ ಕೆಲಸ ಅಂದರೆ ಕೇಳಬೇಕೆ? ವಾಸಿಸಲು ಮನೆ, ಕೈ ತುಂಬ ಸಂಬಳ, ವಿಧ ವಿಧ ಬಟ್ಟೆ ಎಲ್ಲವನ್ನೂ ಆತನಿಗೆ ಕೊಡುವ ವ್ಯವಸ್ಥೆ ಮಾಡುತ್ತಾನೆ. ಅವುಗಳನ್ನು ಕಂಡ ಗಿರಿಗೆ ಮತ್ತೆ ಆ ಸಂತರು ಹೇಳಿದ ಮಾತು ‘ಸತ್ಯ ಹೇಳಿದರೆ ಅದು ನಮ್ಮ ಉಸಿರು ಇರುವವರೆಗೂ ಕಾಪಾಡುತ್ತದೆ’ ಎನ್ನುವುದು ನೆನಪಾಗಿ ನಿಜ ಎನಿಸುತ್ತದೆ.

ಇತ್ತ ಮೂರು ನಾಲ್ಕು ದಿನ ಕಳೆದರೂ ತನ್ನ ಮಗ ಬಂದಿಲ್ಲ ಎಂದು ಚಿಂತೆ ಮಾಡುತ್ತ ಭರತ್ ಕುಳಿತಿರುತ್ತಾನೆ. ಆಗ ಇದ್ದಕ್ಕಿದ್ದಂತೆ ರಾಜನು ಕೊಟ್ಟ ಹೊಸ ಪೋಷಾಕಿನಲ್ಲಿ ಬಂದ ಗಿರಿಯನ್ನು ಕಂಡವ ಕಣ್ಣರಳಿಸಿ ‘ಇದೆಲ್ಲಾ ಏನೋ’ ಎಂದು ಆಶ್ಚರ್ಯದಿಂದ ಕೇಳಿದಾಗ ಗಿರಿ ‘ನಿನ್ನ ಮಾತು ಮೀರಿ ಆ ಸಂತರು ಹೇಳಿದ ಮಾತಿನಂತೆ ಸತ್ಯವನ್ನು ನುಡಿದ ಫಲ ಇದು’ ಎಂದು ಎಲ್ಲವನ್ನೂ ವಿವರಿಸಿ ಹೇಳುತ್ತಾನೆ. ಆತನ ಮಾತು ಕೇಳಿಸಿಕೊಂಡ ಭರತ್ ‘ಛೇ... ನನ್ನ ಸ್ವಾರ್ಥ ಮತ್ತು ದಡ್ಡತನದಿಂದ ಆ ರೀತಿ ಹೇಳಿದ್ದೇ ಅದು ತಪ್ಪು ಎಂದು ನನಗೂ ಈಗ ಅರಿವಾಗಿದೆ. ಇನ್ನು ಮುಂದೆ ನಾನು ಕಳ್ಳತನ ಬಿಟ್ಟು ಸತ್ಯ ಮಾರ್ಗದಲ್ಲಿಯೇ ನಡೆದು ಜೀವನ ಸಾಗಿಸುವೆ ಎಂದು ಹೇಳಿ ಮಗನಿಗೆ ಒಳ್ಳೆಯದಾಗಲಿ ಎಂದು ಹರಸಿ ಕಳುಹಿಸಿ ಕೊಡುತ್ತಾನೆ. ■

# ಸೆಣ್ಣೆಯ ಸಿಡುಕು

■ ಬೀರಣ್ಣ ನಾಯಕ ಮೊಗಟಾ
ಕಲೆ: ಸಂತೋಷ್ ಸಸಿಹಿತ್ಲು



ಸೆಣ್ಣೆ ಎಂದರೆ ಕುಟುಂಬಕ್ಕೆಲ್ಲ
ಅವಳೇ ಎಲ್ಲರ ಉಸಿರು
ಸೆಣ್ಣೆಯೊಬ್ಬಳು ಮನೆಯಲ್ಲಿದ್ದರೆ
ನಗುವಿನ ಹಸಿರೇ ಹಸಿರು

ಸೆಣ್ಣೆಯ ಸಿಟ್ಟು, ಸೆಣ್ಣೆಯ ಸಿಡುಕು
ನೋಡಲು ಚೆಂದವೇ ಚೆಂದ
ತಲೆಯದು ಕೆಳಗಡೆ, ಹಿಂಬದಿ ಮೇಲ್ಗಡೆ
ಎಲ್ಲರ ಮನದಲೂ ಆನಂದ

ಸಿಟ್ಟಿನ ಭರದಲಿ, ಪುಟ ಪುಟ ನಡೆಯುತ
ಕೋಣೆಯ ಮೂಲೆಯ ಸೇರುವಳು
ಸಿಡುಕಿನ ಸಮಯದಿ, ಕೈಯಲಿ ಎತ್ತಿ
ಮಮ್ಮನ ಮೊಬೈಲ್ ಒಡೆಯುವಳು

ಸಿಟ್ಟಿನ ಭರದಲಿ, ಮುಖವದು ಗೋಡೆಗೆ
ತೆರೆಗಣ್ಣಲಿ ಇಣುಕಿ ನೋಡುವಳು
ಎಲ್ಲರ ಗಮನ ಬೇರೆಡೆ ಇರಲು
ಸಣ್ಣಕೆ ಅಳುತ ಸೆಳೆಯುವಳು

ತನ್ನದೇ ಮಾತಲಿ, ಅವಳದೇ ಭಾವದಿ
ಇಡುವಳು ತನ್ನಯ ಬೇಡಿಕೆಯಾ
ಮದ್ದಿನ ಸೆಣ್ಣೆ, ಉಸಿರಿದ ಕೂಡಲೇ
ಕೊಡಲೇ ಬೇಕು ಕಾಣಿಕೆಯಾ

## ಕುಂಚ ಪ್ರಪಂಚ





**ಆರೋಹಿ ಎಸ್.**
2ನೇ ತರಗತಿ,
ಶ್ರೀಚೈತನ್ಯ ಟೆಕ್ನೊ ಸ್ಕೂಲ್, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in